**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೊರಟಗೆರೆ**

**ದಿನಾಂಕ 14ನೇ ಮಾರ್ಚ್ 2017**

**ಉಪಸ್ಥಿತರು ಃ ಶ್ರೀ ಪ್ರಕಾಶ ವಿ.,** ಬಿ.ಎ.ಎಲ್., ಎಲ್.ಎಲ್.ಬಿ.
**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಗಳು,**

**ಅಸಲು ದಾವೆ ಸಂಖ್ಯೆ ಃ 171/2015**

**ವಾದಿಗಳು** ಃ ಆರ್. ಬಾನುಪ್ರಕಾಶ್ ಬಿನ್ ಲೇ. ಸೂರ್ಯನಾರಾಯಣ
ವಯಸ್ಸು ಸುಮಾರು 55 ವರ್ಷಗಳು,
ವಾಸ ಃ ಅಕ್ಕಿರಾಂಪುರ, ಹೊಳವನಹಳ್ಳಿ ಹೋಬಳಿ,
ಕೊರಟಗೆರೆ ತಾಲ್ಲೂಕು.

(ಪ್ರತಿನಿಧಿಸುವವರು ಃ ಶ್ರೀ ಬಿ.ಹೆಚ್. ನಾಗೇಂದ್ರಪ್ಪ, ವಕೀಲರು)

**-ವಿರುದ್ಧ-**

**ಪ್ರತಿವಾದಿಗಳು** ಃ ವೀರಸಿದ್ದಯ್ಯ ಆಲಿಯಾಸ್ ಈರಸಿದ್ದಯ್ಯ
ಬಿನ್ ಲೇ.ಸಿದ್ದಪ್ಪ, ವಯಸ್ಸು ಸುಮಾರು 55 ವರ್ಷಗಳು,
ವಾಸ ಃ ಅಕ್ಕಿರಾಂಪುರ, ಹೊಳವನಹಳ್ಳಿ ಹೋಬಳಿ,
ಕೊರಟಗೆರೆ ತಾಲ್ಲೂಕು.

(ಪ್ರತಿನಿಧಿಸುವವರು ಃ ಶ್ರೀ ಜಿ.ಡಿ. ದೇವರಾಜು, ವಕೀಲರು)

**ಮದ್ಯಂತರ ಅರ್ಜಿ 1 ರ ಪಕ್ಷಕಾರರು**

**ಅರ್ಜಿದಾರರು ಃ ಆರ್. ಬಾನುಪ್ರಕಾಶ್ ... ವಾದಿ**

**ವಿರುದ್ಧ**

**ಎದುರುದಾರರು ಃ ವೀರಸಿದ್ದಯ್ಯ ಆಲಿಯಾಸ್ ಈರಸಿದ್ದಯ್ಯ... ಪ್ರತಿವಾದಿ**

**ಮಧ್ಯಂತರ ಅರ್ಜಿಸಂಖ್ಯೆ ಃ 1 ರ ಮೇಲೆ ಆದೇಶ**

ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಸಿವಿಲ್ ಪ್ರಕ್ರಿಯ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ದಾವಾ ತೀರ್ಮಾನವಾಗುವವರೆಗೂ ಪ್ರತಿವಾದಿಯು ವಾದಿಯ ದಾವಾ ಸ್ವತ್ತಿನ ಶಾಂತಿಯುತ ಸ್ವಾಧೀನ ಅನುಭವಕ್ಕೆ ತೊಂದರೆ ನೀಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ನೀಡಬೇಕೆಂದು ಕೋರಿರುತ್ತಾರೆ.

2. ವಾದಿ ತನ್ನ ಪ್ರಮಾಣಪತ್ರದಲ್ಲಿ ವಾದಪತ್ರದಲ್ಲಿನ ಅಂಶಗಳನ್ನು ಪ್ರಮಾಣಪತ್ರದ ಭಾಗವೆಂದು ಪರಿಗಣಿಸಬೇಕೆಂದು ಹಾಜರುಪಡಿಸಿರುವ ದಾಖಲೆಗಳು ಮೇಲ್ನೋಟಕ್ಕೆ ದಾವಾ ಸ್ವತುಗ್ತಳ ಮೇಲೆ ವಾದಿಯ ಹಕ್ಕು ಮತ್ತು ಜಂಟಿ ಸ್ವಾಧೀನ ಹಾಗೂ ಸಂಭಾವ್ಯತೆ ವಾದಿಯ ಪರವಾಗಿ ಇದೆ ಎಂಬುದು ಸಾಭೀತು ಪಡಿಸುತ್ತದೆ. ಪ್ರತಿವಾದಿಯ ಅಕ್ರಮಗಳನ್ನು ತಡೆಯಲು ಈ ದಾವಾ ತೀರ್ಮಾನವಾಗುವವರೆಗೂ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಹಸ್ತಕ್ಷೇಪ ಮಾಡದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಹೊರಡಿಸುವುದು ಅವಶ್ಯಕತೆ ಇರುತ್ತದ ಎಂದು ಕಾರಣಗಳನ್ನು ನೀಡಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

3. ದಾವಾ ಸಮನ್ಸ್‌ಗೆ ಪ್ರತಿಯಾಗಿ ಪ್ರತಿವಾದಿಯು ವಕೀಲರ ಮೂಲಕ ಹಾಜರಾಗಿ ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಪ್ರತಿವಾದ ಪತ್ರದಲ್ಲಿನ ಅಂಶಗಳನ್ನೇ ಮಧ್ಯಂತರ ಅರ್ಜಿ ಸಂಖ್ಯೆ-1ಕ್ಕೆ ತಕರಾರು ಎಂದು ಪರಿಗಣಿಸಬೇಕೆಂದು ಕೋರಿ ಮನವಿಯನ್ನು ಸಲ್ಲಿಸಿ ಪ್ರತಿವಾದ ಪತ್ರವನ್ನೇ ತಕರಾರು ಎಂದು ಅಳವಡಿಸಿಕೊಂಡಿರುತ್ತಾರೆ. ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ವಾದಪತ್ರದಲ್ಲಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಹಾಗೂ ಪ್ರತಿವಾದಿಯು ಕಾನಿಷ್ಮಾರಿ ನಂ.3, ವಿಸೀರ್ಣ

ಪೂ-ಪಃ 60 ಅಡಿ, ಉ-ದ ಃ 40 ಅಡಿ ಉಳ್ಳ ನಿವೇಶನವನ್ನು ನಂಜಮ್ಮ ಕೋಂ ಲಿಂಗಪ್ಪ ಇವರಿಂದ ನೊಂದಾಯಿತ ಕ್ರಯಪತ್ರದ ಮೂಲಕ ದಿನಾಂಕ 4-6-1979ರಂದು ಶುದ್ಧ ಕ್ರಯಕ್ಕೆ ಖರೀದಿಸಿ ಅಂದಿನಿಂದ ಸದರಿ ಸ್ವತ್ತಿನಲ್ಲಿ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಪ್ರತಿವಾದಿ ಸದರಿ ಸ್ವತ್ತಿನಲ್ಲಿ ಪೂರ್ವದ ಕಡೆ ಮನೆ ಕಟ್ಟಿಕೊಂಡು ವಾಸ ಇರುತ್ತಾರೆ. ಮನೆಯ ಪಶ್ಚಿಮಕ್ಕೆ 40X40 ಅಡಿಗಳ ಜಾಗ ಉಳಿಸಿಕೊಂಡಿದ್ದು ಸದರಿ ಸ್ವತ್ತಿಗೆ ಪಶ್ಚಿಮ, ಉತ್ತರ, ದಕ್ಷಿಣದ ಕಡೆ ಹದ್ದುಬಸ್ತಿಗೆ ಕಲ್ಲು ಚಪ್ಪಡಿಗಳನ್ನು ನಿಲ್ಲಿಸಿಕೊಂಡಿದ್ದು, ಪ್ರತಿವಾದಿಯ ಸ್ವಾಧೀನಾನುಭವದಲ್ಲಿರುತ್ತದೆ ಎಂದು ಪ್ರತಿವಾದವನ್ನು ಮಂಡಿಸಿರುತ್ತಾರೆ.

4. ಪ್ರತಿವಾದಿಯು ಮುಂದುವರೆದು ತಾನು ವಾಸವಿರುವ ಮನೆಯ ಖಾತಾ ಸಂಖ್ಯೆಃ 444-1 ವಿಸ್ತೀರ್ಣ ಪೂ-ಪಃ 20 ಅಡಿ ಉ-ದ ಃ 40 ಅಡಿ ಇರುತ್ತದೆ. ಮನೆಯ ಪಶ್ಚಿಮಕ್ಕೆ ಇರುವ ನಿವೇಶನದ ಖಾತಾ ಸಂಖ್ಯೆಃ 444-2 ವಿಸ್ತೀರ್ಣ ಪೂ-ಪ ಃ 40 ಅಡಿ, ಉ-ದಃ 40 ಅಡಿಗಳು ಇದ್ದು ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇರುತ್ತದೆ. ಪ್ರತಿವಾದಿಯ ದಾವಾ ಸ್ವತ್ತಿಗೆ ಪಂಚಾಯತಿ ಅಧಿಕಾರಿಗಳೊಂದಿಗೆ ಷಾಮೀಲಾಗಿ ಸುಳ್ಳು

ದಾಖಲೆ ಪ್ರತಿಗಳನ್ನು ಸೃಷ್ಟಿಸಿಕೊಂಡು ಪ್ರತಿವಾದಿಗೆ ಕಿರಕುಳ ನೀಡುವ ಉದ್ದೇಶದಿಂದ ಈ ದಾವಾ ಸಲ್ಲಿಸಿರುತ್ತಾರೆ. ವಾದಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ. ದಾವಾ ಸ್ವತ್ತು ಪ್ರತಿವಾದಿಯು ತಾನು ವಾಸವಿರುವ ಮನೆಯ ಪಶ್ಚಿಮಕ್ಕೆ ಉಳಿಸಿಕೊಂಡಿರುವ ಪ್ರತಿವಾದಿಯ ಸ್ವಾಧೀನದಲ್ಲಿರುವ ಸ್ವತ್ತಾಗಿರುತ್ತದೆ. ವಾದಿಯು ಸುಳ್ಳು ಚೆಕ್ಕುಬಂದಿ ಮತ್ತು ಅಳತೆ ನೀಡಿ ಪಂಚಾಯತಿ ಅಧಿಕಾರಿಗಳೊಂದಿಗೆ ಷಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ದಾವೆಗೆ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದು ಪ್ರತಿವಾದವನ್ನು ಮಂಡಿಸಿ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಕೋರಿರುತ್ತಾರೆ.

5. ವಾದ ವಿವಾದವನ್ನು ಆಲಿಸಲಾಯಿತು. ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವಿಸಿರುತ್ತವೆ :

1. ದಾವೆಯು ಮೇಲ್ನೋಟದ ದಾವೆ ವಾದಿಯ ಪರವಾಗಿ ಇದೆ ಎಂದು ವಾದಿ ತೋರ್ಪಡಿಸಿರುತ್ತಾರೆಯೇ ?

2. ದಾವೆಯ ಸಂಭಾವ್ಯತೆಯ ಸಮತೋಲನ ವಾದಿಯ ಪರವಾಗಿ ಇರುತ್ತದೆಯೇ ?

3. ಅರ್ಜಿಯನ್ನು ಪುರಸ್ಕರಿಸದಿದ್ದರೆ ವಾದಿಗೆ ಭರಿಸಲಾರದ ಮತ್ತು ಪರಿಹಾರವನ್ನು ನೀಡಲಾಗದಂತಹ ತೊಂದರೆ ಆಗುತ್ತದೆ ಎಂದು ವಾದಿಯು ತೋರ್ಪಡಿಸಿರುತ್ತಾರೆಯೇ ?

4. ಯಾವ ಆದೇಶ ?

6. ಕಡತದಲ್ಲಿ ಲಭ್ಯವಿರುವ ವಾದ ವಿವಾದಾಂಶಗಳು ಮತ್ತು ದಾಖಲೆಗಳ ಹಾಗೂ ದಾವೆಯ ವಸ್ತುಸ್ಥಿತಿ ಮತ್ತು ಸಂಗತಿಗಳ ಆಧಾರದಿಂದ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದ್ದೇನೆ.

ಅಂಶ 1 **...** ನಕಾರಾತ್ಮಕವಾಗಿ,

ಅಂಶ 2 **...** ನಕಾರಾತ್ಮಕವಾಗಿ,

ಅಂಶ 3 **...** ನಕಾರಾತ್ಮಕವಾಗಿ,

ಅಂಶ 4 **...** ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ :

**ಕಾರಣಗಳು :**

7. **ಅಂಶ 1ರಿಂದ 3** : ಈ ಮೂರು ಅಂಶಗಳು ಒಂದಕ್ಕೊಂದು ಹೊಂದಿಕೊಂಡಿರುವುದರಿಂದ ವಿಮರ್ಷೆಗಾಗಿ ಒಟ್ಟಿಗೆ ತೆಗೆದುಕೊಳ್ಳಲಾಯಿತು. ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ದ ದಾವಾ ಸ್ವತ್ತು ಅಕ್ಕಿರಾಂಪುರ ಗ್ರಾಮ ಪಂಚಾಯ್ತಿಯ ನೊಂದಣಿ ಸಂಖ್ಯೆ 848, ವಿಸ್ತೀರ್ಣ 30X40 ಅಡಿಗಳ ನಿವೇಶನಕ್ಕೆ ದಾಖಲಿಸಿ ವಾದಿ ದಾವಾ ಸ್ವತ್ತಿನ ಮಾಲೀಕನೆಂದು ಘೋಷಿಸಬೇಕೆಂದು ಮತ್ತು ಪ್ರತಿವಾದಿಯ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಹಾಗೂ ಸಾಂಧರ್ಬಿಕ ಖರ್ಚುಗಳನ್ನು ಕೋರಿ ದಾವಾ ದಾಖಲಿಸಿರುತ್ತಾರೆ.

ವಾದಿ ತನ್ನ ವಾದಪತ್ರದಲ್ಲಿ ದಾವಾ ಸ್ವತ್ತು ಮೊದಲಿಗೆ ವಾದಿಯತಾತ ಬಿ.ವೆಂಕಟಶಾಮಯ್ಯನವರ ಹೆಸರಿನಲ್ಲಿ ಇದ್ದು ಈಗ ವಾದಿಯ ಹೆಸರಿಗೆ ಇರುತ್ತದೆ. ದಾವಾ ಆಸ್ತಿ ವಾದಿಯ ಪಿತ್ರಾರ್ಜಿತ ಆಸ್ತಿ ಆಗಿದ್ದು ವಾದಿಯೇ ಮಾಲೀಕನಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ. ವಾದಿಯು ಪಂಚಾಯ್ತಿಗೆ ತೆರಿಗೆಗಳನ್ನು ಕಟ್ಟಿರುತ್ತಾರೆ. ದಾವಾ ಸ್ವತ್ತಿನಲ್ಲಿ ಮನೆ ಕಟ್ಟುವ ಉದ್ದೇಶದಿಂದ

ದಿನಾಂಕ 4-3-2010ರಲ್ಲಿ ಅಕ್ಕಿರಾಂಪುರ ಗ್ರಾಮ ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆಯಲಾಗಿದ್ದು, ಆರ್ಥಿಕ ತೊಂದರೆಯಿಂದ ಮನೆ ಕಟ್ಟಲು ಆಗಿರುವುದಿಲ್ಲ, ಈ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು ದಾವಾ ಆಸ್ತಿಯ ಚೆಕ್ಕುಬಂದಿಯನ್ನು ನೀಡಿ ಪ್ರತಿವಾದಿಯು ಅಕ್ಕಿರಾಂಪುರ ಗ್ರಾಮ ಪಂಚಾಯ್ತಿಯಿಂದ ಪರವಾನಿಗೆಯನ್ನು ಪಡೆಯಲು ಪ್ರಯತ್ನಿಸಿದ್ದು, ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ ಪಡಿಸಿರುತ್ತಾರೆ. ಮತ್ತು ದಾವಾ ಸ್ವತ್ತನ್ನು ಒತ್ತುವರಿ ಮಾಡಲು ಪ್ರಯತ್ನಿಸಿರುತ್ತಾರೆ. ಆದ್ದರಿಂದ ಈ ದಾವೆಯನ್ನು ದಾಖಲಿಸಲಾಗಿರುತ್ತದೆ ಎಂದು ವಾದಾಂಶಗಳನ್ನು ಮಂಡಿಸಿರುತ್ತಾರೆ.

8. ವಾದಿಯು ದಾವಾ ಆಸ್ತಿಗೆ ಸಂಬಂಧಿಸಿದ 2011-2012ನೇ ಸಾಲಿನ ತೆರಿಗೆ ವಿಧಿಸುವ ಪಟ್ಟಿ ಅನುಬಂಧ-1 ನ್ನು ಮತ್ತು 2015-16ನೇ ಸಾಲಿನ

ತೆರಿಗೆಗಳ ಬೇಡಿಕೆ ಡಿಮ್ಯಾಂಡ್ ರಿರಿಜಿಸ್ಟರ್ ಪ್ರತಿ ನಮೂನೆ-11 ನ್ನು ಹಾಜರುಪಡಿಸಿರುತ್ತಾರೆ. ಈ ದಾಖಲೆಗಳ ಪ್ರಕಾರ ಆಸ್ತಿಯ ಸಂಖ್ಯೆ 484 ವಿಸ್ತೀರ್ಣ ಪೂ-ಪ ಃ 30 ಅಡಿ , ಉ-ದ ಃ 40 ಅಡಿಗಳ ಆಸ್ತಿ ಚೆಕ್ಕುಬಂದಿ ಃ ಪೂರ್ವಕ್ಕೆ ಃ ದಾರಿ, ಪಶ್ಚಿಮಕ್ಕೆ ಃ ದಾರಿ, ಉತ್ತರಕ್ಕೆ ಃ ಶಾಂತಮ್ಮನ ಮನೆ ಮತ್ತು ದಕ್ಷಿಣಕ್ಕೆ ಃ ದಾರಿ, ಈ ಮದ್ಯೆ ಇರುವ ಸ್ವತ್ತು ವಾದಿಯ ಹೆಸರಿನಲ್ಲಿ ಇರುತ್ತದೆ. ಮನೆ ಕಟ್ಟುವ ಲೈಸೆನ್ಸ್ ಪ್ರತಿಯ ಪ್ರಕಾರವು 30 X40 ಅಡಿಗಳ ವಿಸ್ತೀರ್ಣದಲ್ಲಿ ಮತ್ತು ಅದೇ ಚೆಕ್ಕುಬಂದಿಯಲ್ಲಿನ ವಿಸ್ತೀರ್ಣಕ್ಕೆ ಸಂಬಂಧಿಸಿ ದಿನಾಂಕ 4-3-2010ರಂದು ಪರವಾನಿಗೆಯನ್ನು ನೀಡಿರುತ್ತಾರೆ.

9. ವಾದಿಯು ವಕೀಲರ ಮೂಲಕ ನೀಡಿದ ದಿನಾಂಕ 5-8-2015ರ ನೋಟೀಸನ್ನು ಪರಿಶೀಲಿಸಲಾಗಿ, ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿಯಾಗಿದ್ದು ವೆಂಕಟಶಾಮಯ್ಯನವರ ಹೆಸರಿನಲ್ಲಿದ್ದು ನಂತರ ವಾದಿಯ ಅಣ್ಣ ಲಕ್ಷ್ಮೀಕಾಂತರವರ ಹೆಸರಿಗೆ ಬದಲಾಗಿದ್ದು ಈಗ ವಾದಿಯ ಹೆಸರಿನಲ್ಲಿ ಇರುತ್ತದೆ. ದಿನಾಂಕ 4-3-2010ರಲ್ಲಿ ಮನೆ ಕಟ್ಟಲು ಲೈಸೆನ್ಸ್ ಸಹಾ ಪಡೆದಿದ್ದು ಆರ್ಥಿಕ ತೊಂದರೆಯಿಂದ ಮನೆ ಕಟ್ಟಲು ಆಗಿರುವುದಿಲ್ಲ. ಈ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು ಅಕ್ಕಿರಾಂಪುರ ಗ್ರಾಮದ ವೀರಸಿದ್ದಯ್ಯ ಬಿನ್ ಲೇಟ್ ಸಿದ್ದಣ್ಣ (ಪ್ರತಿವಾದಿ) ರವರಿಗೆ ಷೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿ ನೀಡಿ

ಮನೆ ಕಟ್ಟಲು ಪರವಾನಿಗೆಯನ್ನು ಪಡೆಯಲು ರಾಜಕೀಯ ಒತ್ತಡ ತರುತ್ತಿದ್ದಾರೆ ಎಂದು ತಿಳಿದುಬಂದಿರುತ್ತದೆ. ಯಾವುದೇ ಕಾರಣಕ್ಕೂ ಸದರಿ ಚೆಕ್ಕುಬಂದಿಯಲ್ಲಿ ಬರುವ ಸ್ವತ್ತಿನಲ್ಲಿ ಮನೆ ಕಟ್ಟಲು ಲೈಸೆನ್ಸ್ ನೀಡಬಾರದೆಂದು ಕೋರಿ ನೋಟೀಸನ್ನು ನೀಡಿರುತ್ತಾರೆ.

10. ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಪ್ರತಿವಾದಿಯು ಖಾನಿಷ್ಮಾರಿ ಸಂಖ್ಯೆ: 3 , ವಿಸ್ತೀರ್ಣ ಪೂ-ಪ : ೮60 ಅಡಿ ಉ-ದ : 40 ಅಡಿ ಉಳ್ಳ ನಿವೇಶನವನ್ನು ನಂಜಮ್ಮ ಕೋಂ ಲಿಂಗಪ್ಪರವರಿಂದ ದಿನಾಂಕ 4-6-1979ರಲ್ಲಿ ಖರೀದಿಸಿದ್ದು ಅಂದಿನಿಂದ ಸದರಿ ಸ್ವತ್ತು ವಾದಿಯ ಸ್ವಾಧೀನದಲ್ಲಿರುತ್ತದೆ. ಸದರಿ ಆಸ್ತಿಯ ಪೂರ್ವದ ಕಡೆ 20 X 40 ಅಡಿಗಳ ಮನೆಯನ್ನು ಕಟ್ಟಿದ್ದು ಅದರ ಸಂಖ್ಯೆ: 444-1 ಆಗಿರುತ್ತದೆ. ಮನೆಯ ಪಶ್ಚಿಮಕ್ಕೆ 40 X 40 ಅಡಿಗಳ ಉಳಿಕೆ ನಿವೇಶನವಿದ್ದು ಅದರ ಸಂಖ್ಯೆ: 444-2 ಆಗಿರುತ್ತದೆ. ವಾದಿಯು ಪ್ರತಿವಾದಿಯ ಆಸ್ತಿಯ ಚೆಕ್ಕುಬಂದಿಯನ್ನು ನೀಡಿ ದಾವಾ ದಾಖಲಿಸಿರುತ್ತಾರೆ ಎಂದು ಪ್ರತಿವಾದವನ್ನು ಮಂಡಿಸಿರುತ್ತಾರೆ.

11. ಪ್ರತಿವಾದಿ ತನ್ನ ಪ್ರತಿವಾದಕ್ಕೆ ಪೂರಕವಾಗುವಂತೆ ದಿನಾಂಕ 4-6-1979ರ ಕ್ರಯಪತ್ರವನ್ನು ಹಾಜರುಪಡಿಸಿರುತ್ತಾರೆ. ಸದರಿ ಕ್ರಯಪತ್ರದ ಪ್ರಕಾರ ಅಕ್ಕಿರಾಂಪುರ ಗ್ರಾಮದಲ್ಲಿ ಹೊಸ ಗ್ರಾಮ ಠಾಣಾದಲ್ಲಿ ಪೂರ್ವ ಭಾಗದಲ್ಲಿರುವ

ಖಾನಿಷ್ಮಾರಿ ನಂ.3 , ಪೂ-ಪ : 60 ಅಡಿ , ಉ-ದ : 40 ಅಡಿ ಅಗಲದ ನಿವೇಶನವನ್ನು ನಂಜಮ್ಮ ಕೋಂ ಲಿಂಗಪ್ಪರವರಿಂದ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ : ಸರ್ಕಾರಿ ದಾರಿ, ಪಶ್ಚಿಮಕ್ಕೆ : ಸರ್ಕಾರಿ ದಾರಿ, ಉತ್ತರಕ್ಕೆ : ಸರ್ಕಾರಿ ಓಣಿ ಮತ್ತು ದಕ್ಷಿಣಕ್ಕೆ : ಗೌವಣ್ಣನವರ ನಿವೇಶನ ಎಂದು ನಮೂದಿಸಿರುತ್ತಾರೆ. ಪ್ರತಿವಾದಿಯು ದಿನಾಂಕ 12-12-1973ನೇ ಸಾಲಿನ ಶುದ್ದ ಕ್ರಯಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯು ವಾದಿಯ ಮಾರಾಟಗಾರರಾದ ನಂಜಮ್ಮರವರು ಖರೀದಿ ಮಾಡಿರುವ ಆಸ್ತಿಯ ಕ್ರಯಪತ್ರ ಆಗಿರುತ್ತದೆ. ಸದರಿ ದಾಖಲೆಯಲ್ಲಿ ಅಕ್ಕಿರಾಂಪುರ ಗ್ರಾಮದ ಹೊಸ ಗ್ರಾಮಠಾಣಾದ ಖಾನಿಷ್ಮಾರಿ ನಂ.3ನೇ ನಿವೇಶನ, 60 X 40 ವಿಸ್ತೀರ್ಣದ ಚೆಕ್ಕುಬಂದಿ, ಪೂರ್ವಕ್ಕೆ : ಸರ್ಕಾರಿ ದಾರ ಪಶ್ಚಿಮಕ್ಕೆ : ಸರ್ಕಾರಿ ದಾರಿ ದ ಉತ್ತರಕ್ಕೆ ರಸ್ತೆ ದಕ್ಷಿಣಕ್ಕೆ ಗೌವಣ್ಣನವಬರ ನಿವೇಶನ, ಈ ಮದ್ಯೆ ಇರುವ ನಿವೇಶನವನ್ನು ತಿಮ್ಮಯ್ಯ ಬಿನ್ ವೀರನಾಗಪ್ಪರವರಿಂದ ವಾದಿಯ ಮಾರಾಟಗಾರರಾದ ನಂಜಮ್ಮರವರು ಖರೀದಿ ಮಾಡಿರುತ್ತಾರೆ. 2 ಕ್ರಯಪತ್ರಗಳಲ್ಲಿನ ಚೆಕ್ಕು ಬಂದಿ ಮತ್ತು ನಿವೇಶನದ ಸಂಖ್ಯೆ ಒಂದೇ ಆಗಿರುತ್ತದೆ. ಪ್ರತಿವಾದಿ ಹಾಜರುಪಡಿಸಿರುವ ಪರವಾನಿಗೆಯ ಪ್ರಕಾರ ದಿನಾಂಕ 24-11-1966ರಂದು ತಿಮ್ಮಯ್ಯ ಬಿನ್ ಚಿಕ್ಕನಾಗಪ್ಪರವರು ಮನೆ ಕಟ್ಟಲು

ಪರವಾನಿಗೆಯನ್ನು ಪಡೆದಿರುತ್ತಾರೆ. 40 X60 ವಿಸ್ತೀರ್ಣದ ನಿವೇಶನಕ್ಕೆ ಚೆಕ್ಕುಬಂದಿ, ಪೂರ್ವಕ್ಕೆ ಃ ಸರ್ಕಾರಿ ದಾರಿ, ಪಶ್ಚಿಮಕ್ಕೆ ಃ ಸರ್ಕಾರಿ ದಾರಿ, ಉತ್ತರಕ್ಕೆ ಃ ಸರ್ಕಾರಿ ದಾರಿ ದಕ್ಷಿಣಕ್ಕೆ ಃ ಗೌವಣ್ಣನವರ ಸರ್ವೆ ನಂ. ಜಮೀನು. ಈ ಮಧ್ಯೆ ಇರುವ ಆಸ್ತಿಗೆ ಅಕ್ಕಿರಾಂಪುರ ಗ್ರಾಮಪಂಚಾಯ್ತಿಯಿಂದ ಪರವಾನಿಗೆಯನ್ನು ನೀಡಿರುತ್ತಾರೆ. ಈ ದಾಖಲೆಯಪ್ರಕಾರ ಪ್ರತಿವಾದಿಯ ಮಾರಾಟಗಾರರಾದ ನಂಜಮ್ಮ್ರರವರ ಮಾರಾಟಗಾರರಾದ ತಿಮ್ಮ್ರಯ್ಯರವರು ಸದರಿ ಆಸ್ತಿಗೆ ಪರವಾನಿಗೆಯನ್ನು ಪಡೆದಿರುತ್ತಾರೆ. ಈ ದಾಖಲೆಗಳ ಪ್ರಕಾರ 1966ರಿಂದಲೂ ಚೆಕ್ಕುಬಂದಿ ಒಂದೇ ಇರುವುದು ಕಂಡುಬರುತ್ತದೆ. ಪ್ರತಿವಾದಿಯು ದಿನಾಂಕ 20-5-2011ರ ಪರವಾನಿಗೆಯನ್ನು ಹಾಜರುಪಡಿಸಿದ್ದು ಖಾತೆ ಸಂಖ್ಯೆಃ 442-2 ರಲ್ಲಿ 25 X 25 ವಿಸ್ತೀರ್ಣದಲ್ಲಿ ಮನೆ ಕಟ್ಟಲು ಪರವಾನಿಗೆಯನ್ನು ಪಡೆದಿರುತ್ತಾರೆ.

12. ಪ್ರತಿವಾದಿ ನೋಂದಣಿ ಕ್ರಯಪತ್ರಗಳ ಆಧಾರದ ಮೇಲೆ ಕ್ಲೇಮು ಮಾಡುತ್ತಿರುವ ಆಸ್ತಿಯ ಚೆಕ್ಕುಬಂದಿ ವಾದ ಪತ್ರದಲ್ಲಿ ನಮಾದಿಸಿರುವ ಚೆಕ್ಕುಬಂದಿಗೂ ಸಾಮ್ಯತೆ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಪ್ರತಿವಾದಿ ಹಾಜರುಪಡಿಸಿರುವ ಗ್ರಾಮಪಂಚಾಯ್ತಿ ಅಧಿಕಾರಿಗಳು ನೀಡಿರುವ ಹಿಂಬರಹಗಳ ಪ್ರಕಾರ ವಾದಿಯ ಹೆಸರಿಗೆ ತೆರಿಗೆ ಡಿಮ್ಯಾಂಡ್ ಪ್ರತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ

ನಡುವೆ ಆಸ್ತಿಗಳ ಚೆಕ್ಕುಬಂದಿಗೆ ಸಂಬಂಧಿಸಿ ಮತ್ತು ದಾವಾ ಆಸ್ತಿಯ ಅಸ್ಥಿತ್ವದ ಬಗ್ಗೆ ತೀವ್ರ ವಾದ ವಿವಾದ ಇರುತ್ತದೆ. ಈ ವಿವಾದವನ್ನು ನಿರ್ಣಯಿಸಲು ಸಂಪೂರ್ಣ ವಿಚಾರಣೆಯ ಅಗತ್ಯವಿರುತ್ತದೆ. ಪ್ರ2ವಾದಿಯು ದಾವಾ ಆಸ್ತಿಯನ್ನು ಕ್ರಯಪತ್ರಗಳ ಆಧಾರದ ಮೇಲೆ ಹಕ್ಕನ್ನು ಪ್ರತಿಪಾದಿಸಿರುತ್ತಾರೆ. ವಾದಿಯು ಕೇವಲ ತೆರಿಗೆಗಳ ಡಿಮ್ಯಾಂಡ್ ರಿಜಿಸ್ಟರ್ ಪ್ರತಿಗಳ ಮೇಲೆ ಅವಲಂಬಿತವಾಗಿ ಹಕ್ಕು ಪ್ರತಿಪಾದಿಸಿರುತ್ತಾರೆ. ಈ ಹಂತದಲ್ಲಿ ವಾದಿ ಕೋರಿರುವಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಮಂಜೂರು ಮಾಡಿದಲ್ಲಿ ಅದರ ಉಪಯೋಗ ಪಡೆದುಕೊಂಡು ಕಟ್ಟಡ ನಿರ್ಮಾಣ ಮಾಡಿದಲ್ಲಿ, ಪ್ರತಿವಾದಿಗೂ ನಷ್ಟ ಉಂಟಾಗುವ ಸಾಧ್ಯತೆ ಇರುತ್ತದೆ. ಮತ್ತು ಪ್ರಕರಣಗಳು ದ್ವಿಗುಣವಾಗುವ ಸಾಧ್ಯತೆ ಇರುತ್ತದೆ. ಮಧ್ಯಂತರ ನಿರ್ಬಂಧಕಾಜ್ಞೆಯನ್ನು ನೀಡದೆ ಇದ್ದಲ್ಲಿ ವಾದಿಗೆ ಯಾವುದೇ ತೊಂದರೆ ಆಗುವುದಿಲ್ಲ. ಮಧ್ಯಂತರ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಿದರೆ ವಾದಿಗಿಂತ ಪ್ರತಿವಾದಿಗೆ ಹೆಚ್ಚಿನ ತೊಂದರೆ ಆಗುವ ಸಾಧ್ಯತೆ ಇರುತ್ತದೆ.

13. ವಾದಿ ಮತ್ತು ಪ್ರತಿವಾದಿಯರುಹಾಜರುಪಡಿಸಿರುವ ದಾಖಲೆಗಳು ಮತ್ತು ವಾದ ಪ್ರತಿವಾದ ಅಂಶಗಳ ಆಧಾರದ ಮೇಲಿಂದ ದಾವೆಯು ಮೇಲ್ನೋಟದ ದಾವೆಯಾಗಿದೆ ಎಂದು ಮತ್ತು ಸಂಭಾವ್ಯತೆಯ ಸಮತೋಲನ

ವಾದಿಯ ಪರ ಇದೆ ಎಂದು ತೋರ್ಪಡಿಸುವಲ್ಲಿ ವಾದಿ ವಿಫಲರಾಗಿರುತ್ತಾರೆ. ಸಂಭಾವ್ಯತೆಯ ಸಮತೋಲನ ವಾದಿಗಿಂತ ಪ್ರತಿವಾದಿಯ ಮೇಲೆ ಇರುತ್ತದೆ. ಈ ಎರಡೂ ಅಂಶಗಳನ್ನು ವಾದಿಯು ತನ್ನ ಪರ ಇವೆ ಎಂದು ತೋರ್ಪಡಿಸಲು ವಿಫಲವಾಗಿರುವುದರಿಂದ 3ನೇ ಅಂಶ ಭರಿಸಲಾರದ ನಷ್ಟ ವಾದಿಯ ಪರ ಇದೆ ಎಂದು ಪರಿಗಣಿಸಲು ಆಗುವುದಿಲ್ಲ. ವಾದಿಯು ಯಾವುದೇ ಕಾರಣದಿಂದಲೂ ಮಧ್ಯಂತರ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಪಡೆಯಲು ಯಾವುದೇ ಸಮಂಜಸವಾದ ಕಾರಣಗಳನ್ನು ನೀಡಿರುವುದಿಲ್ಲ. ಆದ್ದರಿಂದ ಅಂಶ -1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

14. **ಅಂಶ -4** : ಈ ಮೇಲೆ ವಿವರಿಸಿದ ಕಾರಣಗಳಿಗಾಗಿ ಮತ್ತು ದಾವೆಯ ಸಂಗತಿಗಳು ಮತ್ತು ಸಂಧರ್ಬಗಳಿಂದ ಈ ಅಂಶಕ್ಕೆ ಈ ಕೆಳಕಂಡಂತೆ ಉತ್ತರಿಸಿದ್ದೇನೆ.

## ಆದೇಶ

ಮಧ್ಯಂತರ ಅರ್ಜಿ ಸಂಖ್ಯೆ-1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2ರ ಅಡಿಯಲ್ಲಿ ವಾದಿಯ ಪರ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿ ಆದೇಶಿಸಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇಲ್ಲ.

**(ಆದೇಶವನ್ನು ಶೀಘ್ರಲಿಪಿಗಾರನಿಗೆ ಉಕ್ತಲೇಖನ ನೀಡಿ ನೇರವಾಗಿ ಗಣಕೀಕರಿಸಿ ನಂತರ ತಿದ್ದಿ, ಈ ದಿನ ಅಂದರೆ ದಿನಾಂಕ 14ನೇ ಮಾರ್ಚ್ ಮಾಹೆ 2017 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**

**(ಪ್ರಕಾಶ ವಿ.),**
ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಕೊರಟಗೆರೆ.